## ಸಾಲು ಸಾಲು ವೀರಗಲ್ಲು



ಇದು ಮುರುಡೇಶ್ವರದ ಬಳಿಯ ಬಸ್ತಿ ಕೈಕಿಣಿಯ ಸಮೀಪದ ಬಸದಿಯ ಪ್ರಾಂಗಣದಲ್ಲಿರುವ ವೀರಗಲ್ಲಿನ ಚಿತ್ರ. ಕೈಕಿಣಿ ಭಟ್ಕಳದ ಕರಾವಳಿಯ ಪ್ರಮುಖ ಕಡಲೋತ್ತರ ವ್ಯಾಪಾರದ ಕೇಂದ್ರವಾಗಿ ಮೆರೆದಿತ್ತು. ಈ ಶಾಸನಗಳು ಹಿಂದೆ ನಡೆದ ಯುದ್ಧವನ್ನು ನೆನಪಿಸುತ್ತವೆ. ಯುದ್ಧದಲ್ಲಿ ಮಡಿದ ವೀರರ ನೆನಪಿನಲ್ಲಿ ನಡೆಸಿರುವ ಈ ವೀರಗಲ್ಲುಗಳು ಶತಮಾನಗಳಿಂದ ಮಳೆ–ಬಿಸಿಲು–ಗಾಳಿಗೆ ಮೈಯೊಡ್ಡಿ ನಿಂತಿವೆ.

■ **ಮಯೂರ್ ಎಸ್. ತಾಂಡೇಲ್, ಗಂಗೊಳ್ಳಿ**




## ಇದು ಮನೆಯಲ್ಲ- ಪುರಾತನ ಬಾವಿ

ನೋಡಲು ಮನೆಯಂತೆ ಕಾಣುವ ಇದು ಮನೆ ಅಲ್ಲ, ಬಾವಿ ಮನೆ. ದಾವಣಗೆರೆಯ ನಿಟುವಳ್ಳಿ ಗ್ರಾಮದಲ್ಲಿ 1792ರಲ್ಲಿ ನಿರ್ಮಿಸಿದ ಈ ಬಾವಿ ಸುಮಾರು 100 ಅಡಿ ಆಳವಿದೆ. ಇದರಲ್ಲಿ ಅಷ್ಟೇನೂ ನೀರು ಇಲ್ಲ. ಈ ಬಾವಿಯ ಸುತ್ತ ಮನೆಗಳಿದ್ದು, ಇಲ್ಲಿನ ಮಕ್ಕಳು ಈ ಬಾವಿಗೆ ಬಿದ್ದು ಅನಾಹುತ ಮಾಡಿಕೊಂಡಾರೆಂಬ ಮುನ್ನೆಚ್ಚರಿಕೆಯಾಗಿ, ಬಾವಿಯ ಸುತ್ತ 10 ಅಡಿ ಅಗಲ, 10 ಅಡಿ ಉದ್ದದ ತಳಪಾಯ ನಿರ್ಮಿಸಿದ್ದಾರೆ. ಇದರಿಂದಾಗಿ ಬಾವಿಯ ಸುತ್ತ ಸುಂದರವಾಗಿ ಕಾಣುತ್ತದೆ. ಬಾವಿಯ ಒಳ ಹೋಗಲು ಸಣ್ಣ ಸಣ್ಣ ಎರಡು ಬಾಗಿಲುಗಳನ್ನು ಜೋಡಿಸಿ ಬಾವಿ ಆಕರ್ಷಕವಾಗಿ ಕಾಣುವಂತೆ ಬಣ್ಣ ಲೇಪಿಸಲಾಗಿದೆ. ಹೊರಗಡೆ 1792ರಲ್ಲಿ ನಿರ್ಮಿಸಿದ 'ಪುರಾತನ ಬಾವಿ' ಎಂಬ ನಾಮಫಲಕವೂ ಇದೆ.

■ **ಜಿ. ರಾಜಣ್ಣ, ದಾವಣಗೆರೆ**

## ತುರುಚಿ ಗಿಡ

ಹೆಸರೇ ಸೂಚಿಸುವಂತೆ ಇದೊಂದು ತುರುಚಿ ಗಿಡ. ದೇಹಕ್ಕೆ ಮುಟ್ಟಿಸಿಕೊಂಡರೆ, ಮುಟ್ಟಿಸಿಕೊಂಡ ಜಾಗದಲ್ಲೆಲ್ಲ ತುರಿಕೆ ಶುರುವಾಗುತ್ತದೆ. ಇದೇ ಕಾರಣಕ್ಕೆ ಇದನ್ನು ತುರುಚಿ ಗಿಡ ಎಂದು ಕರೆಯಲಾಗುತ್ತದೆ. ಹರುವೆಸೊಪ್ಪಿನ ಜಾತಿಗೆ ಸೇರಿದ ಗಿಡವಿದು. ಹಳ್ಳಿಗಾಡಿನಲ್ಲಿ ಹೆಚ್ಚಾಗಿ ಕಾಣಿಸುವ ಈ ಗಿಡವನ್ನು ಬಾಲ್ಯದಲ್ಲಿ ತಮಾಷೆಗಾಗಿ ಬೇರೊಬ್ಬರ ಮೈ–ಕೈಗೆ ತಾಕಿಸಿ ತಮಾಷೆ ನೋಡುತ್ತಿದ್ದದ್ದುಂಟು.

■ **ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ**

